

ಅದು ಒಂದು ಆಂದೋಲನವೇ ಆಯಿತು. ಜನಪರ ನಿಲುವುಗಳನ್ನು ರೂಪಿಸೋದಕ್ಕೆ ಮತ್ತು ಆ ವಿಷಯದಲ್ಲಿ ಸಾಂಘಿಕವಾದ ಹೋರಾಟಗಳನ್ನ ಕಟ್ಟುವುದಕ್ಕೆ. ತುರ್ತು ಪರಿಸ್ಥಿಯ ಸಂದರ್ಭದಲ್ಲೂ ನೀವು ತುಂಬಾ ಕ್ರಿಯಾಶೀಲರಾಗಿದ್ದಿರಿ. ಅದರ ಬಗ್ಗೆ ಹೇಳಿ.

ಎಸ್. ವೆಂಕಟರಾಮ್, ಯು.ಆರ್. ಅನಂತಮೂರ್ತಿ, ಜಾರ್ಜ್ ಫರ್ನಾಂಡಿಸ್, ರಾಜೀವ ತಾರಾನಾಥ್, ಶೂದ್ರ ಶ್ರೀನಿವಾಸ್ ಅವರ ಜೊತೆಗೂಡಿ ನಾವೆಲ್ಲಾ ಆಗ ತುಂಬಾ ಕೆಲಸ ಮಾಡಿದೆವು; ಪಟ್ಟಾಭಿರಾಮರೆಡ್ಡಿ, ಸ್ನೇಹಲತಾ ರೆಡ್ಡಿ, ಯು.ಆರ್. ಅನಂತಮೂರ್ತಿ, ಕೆ.ಎಂ. ಶಂಕರಪ್ಪ ಮತ್ತು ನಾನು. ಎಲ್ಲರೂ ಜೈಲಿಗೆ ಹೋದರೆ ಕಷ್ಟ ಅಂತ ನಾವು ಕೆಲವರು ಅಂಡರ್ ಗ್ರೌಂಡ್‌ನಲ್ಲಿ ಕೆಲಸ ಮಾಡಿದೆವು. ಜಾರ್ಜ್ ಫರ್ನಾಂಡಿಸ್ ಸರ್ಕಾರದ ಗುರಿಯಾಗಿದ್ರು. ಆದ್ದರಿಂದಲೇ ಅವರು ಪಟ್ಟಾಭಿ ಮತ್ತು ಸ್ನೇಹಾ ಅವರಿಗೆ ತೊಂದರೆ ಕೊಟ್ಟರು.ಅನಂತಮೂರ್ತಿಯವರು ಮೈಸೂರಿನಿಂದ ಕರಪತ್ರಗಳನ್ನೋ ಮತ್ತೊಂದನ್ನೋ ಕಳಿಸಿಕೊಟ್ಟರೆ ಬೀದಿ ನಾಟಕ ಆಡುತ್ತಿದ್ದ ನಾವು ಅವುಗಳನ್ನು ಇಲ್ಲಿ ಭೂಗತರಾಗಿದ್ದವರಿಗೆ ತಲುಪಿಸುವ ವ್ಯವಸ್ಥೆ ಮಾಡುತ್ತಿದ್ದೆವು. ಎಷ್ಟೋ ಬಾರಿ ಸಿಐಡಿಗಳು ನಮ್ಮ ನಾಟಕಕ್ಕೆ ಬಂದು ನಮ್ಮನ್ನು ಗಮನಿಸುತ್ತಿದ್ದರು. ಎ.ಎಸ್. ಮೂರ್ತಿಯವರನ್ನು ಅವರ ಜೊತೆ ಮಾತನಾಡಲು ಬಿಟ್ಟು ನಾವು ನಮ್ಮ ಕೆಲಸ ಮಾಡ್ತಾ ಇದ್ದೆವು. ದೇವರಾಜ ಅರಸು ಅವರಿಗೆ ನಮ್ಮೆಲ್ಲರ ಬಗೆಗೂ ಪ್ರೀತಿ, ವಿಶ್ವಾಸ ಇದ್ದುದರಿಂದ ನಮಗ್ಯಾರಿಗೂ ಹೆಚ್ಚು ತೊಂದರೆಯಾಗಲಿಲ್ಲ. ನನಗೆ ಕೆಲಸ ಹೋಗಿ ತೊಂದರೆಯಾದೀತು ಎನ್ನುವ ಕಾರಣಕ್ಕೇ ಆ ಸಂದರ್ಭದಲ್ಲೇ 'ಇಳಾ ಮುದ್ರಣಾಲಯ'ವನ್ನು ಆರಂಭಿಸಿದ್ದೆ. ಆ ಸಂದರ್ಭದಲ್ಲೇ ದೇವನೂರ ಮಹಾದೇವ ಅವರು ನನಗೆ 'ಇಳಾ ವಿಜಯ' ಅಂತ ನಾಮಕರಣ ಮಾಡಿದ್ದು.

◆ **ನೀವು ರೂಪತಾರಾ, ತುಷಾರ , ಉದಯವಾಣಿ ಪತ್ರಿಕೆಗಳಲ್ಲಿಯೂ ಕೆಲಸ ಮಾಡಿದ್ದೀರಿ. ಆ ಅನುಭವ ಹೇಗಿತ್ತು?**

'ಉದಯವಾಣಿ' ಪತ್ರಿಕೆಗೆ ಕರೆಸ್ಪಾಂಡೆಂಟ್ ಆಗಿ ಕೆಲಸ ಮಾಡಿರುವೆ. 'ತುಷಾರ'ದಲ್ಲಿ ಅಸಿಸ್ಟೆಂಟ್ ಎಡಿಟರ್ ಆಗಿದ್ದೆ. 'ರೂಪತಾರಾ'ದಲ್ಲಿ ನಿರ್ದಿಷ್ಟವಾಗಿ ಯಾವುದೇ ಪದನಾಮ ಇರಲಿಲ್ಲವಾದರೂ, ಎಲ್ಲಾ ಕೆಲಸ ನಾನೇ ಮಾಡ್ತಾ ಇದ್ದೆ. ನನ್ನ ಜೊತೇಲಿ ನನ್ನ ಬಂಧು ಗುರುರಾಜ ಅವರೂ ಕೆಲಸ ಮಾಡ್ತಾ ಇದ್ದರು. 'ಕಲಾಪ' ಅನ್ನೋ ಹೆಸರಿನ ಕಾಲಂನಲ್ಲಿ